ಅ) ಬೆಂಗಳೂರು ನಗರದ ಕೆಲವು ಬೀದಿಗಳಿಗೆ ಹಿಂದಿನ ಕೆಲವು ಆಂಗ್ಲರ ಹೆಸರುಗಳು ಈಗಲೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಆ ಬೀದಿಗಳಿಗೆ ನಮ್ಮ ನಾಡಿನ ರಾಷ್ಟ್ರದ ಕೆಲವು ಹೆಸರಾಂತ ಸಾಹಿತಿಗಳ, ಸಮಾಜ ಸೇವಕರ, ಸ್ವಾತಂತ್ರ್ಯಯೋಧರ ಹೆಸರುಗಳನ್ನು ಇಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ಬಂದಿದೆ.

ಆ) ಇಂತಹ ರಸ್ತೆಗಳಿಗೆ ಹೆಸರಾಂತ ಸಾಹಿತಿಗಳ, ಸಮಾಜ ಸೇವಕರ, ಸ್ವಾತಂತ್ರ್ಯಯೋಧರ ಹೆಸರು ಗಳನ್ನು ಇಡಲು ವಿಭಾಗದ ನಗರ ಪಾಲಿಕೆ ಸದಸ್ಯರ ಅಭಿಪ್ರಾಯ ಪಡೆದು ಹಾಗೂ ಮಹಜರ್ ಮಾಡಿ, ನಗರ ಪಾಲಿಕೆಯು ಕೈಗೊಂಡ ತೀರ್ಮಾನಕ್ಕೆ ಸರ್ಕಾರದ ಅನುಮೋದನೆ ನೀಡಲಾಗುತ್ತದೆ.

ವಿಷಯ :– ಮಳವಳ್ಳಿ ತಾಲ್ಲೂಕಿನ ನವೋದಯ ಪಾಲಿಟೆಕ್ನಿಕ್.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 600 (916)

ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿರುವ ನವೋದಯ ಪಾಲಿಟೆಕ್ನಿಕ್ ಉಪಯೋಗಕ್ಕಾಗಿ ಪೀಠೋಪಕರಣಗಳನ್ನು ಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಕೊಡಲಾಗಿದೆಯೇ ?

ಆ) ಹಾಗಿದ್ದಲ್ಲಿ, ಎಷ್ಟು ಹಣ ಕೊಡಲಾಗಿದೆ ಹಾಗೂ ಯಾವಾಗ ಕೊಡಲಾಗಿದೆ ?

ಇ) ಈ ಪಾಲಿಟೆಕ್ನಿಕ್‌ಗೆ ಮಳವಳ್ಳಿ ಮಧ್ಯ ಭಾಗದಲ್ಲಿ ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ ಹಾಗೂ ಪ್ರತಿಯೊಂದು ಎಕರೆಗೆ ಕೊಟ್ಟಿರುವ ಬೆಲೆ ಎಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಅ) ಹೌದು.

ಆ) ದಿನಾಂಕ 26–3–87 ರಲ್ಲಿ ರೂ. 2 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.

ಇ) ಸದರಿ ಸಂಸ್ಥೆಯು ಖಾಸಗಿ ಸಂಸ್ಥೆಯಾದುದರಿಂದ ಈ ವಿವರಗಳು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ವಿಷಯ :– ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿರತಕ್ಕ ಜೆರಾಕ್ಸ್ ಯಂತ್ರದ ರಿಪೇರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 601 (918)

ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು) :– ಮಾನ್ಯ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ (ಶೇಷಾದ್ರಿ ಐಯರ್ ಮೆಮೊರಿಯಲ್ ಹಾಲ್) ಇರತಕ್ಕಂಥ ಜೆರಾಕ್ಸ್ ಯಂತ್ರ ಕೆಟ್ಟುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ಬೇಗ ರಿಪೇರಿ ಮಾಡಿ ಸಂಶೋಧಕರಿಗೆ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ ?

ಇ) ಈಗಿರುವ ಗ್ರಂಥಾಲಯದ ಕಟ್ಟಡವು ಬಹಳ ಇಕ್ಕಟ್ಟಾಗಿದ್ದು ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕ ರಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಇಲ್ಲದೇ ಇರುವುದು ಮತ್ತು ಗ್ರಂಥಗಳನ್ನು ಸರಿಯಾಗಿ ಇಡಲು ಸ್ಥಳಾವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೇನಾದರೂ ಬಂದಿದೆಯೆ ೇ ?